ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 21.11.2024.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನನ್ನ ಪೂರ್ವಜರು ಶಿವಣ್ಣ ತಂದೆ ಚಂದ್ರಶಾ ಎಂದರೆ ಸರಿ. ಚೋಳಮ್ಮ ಎಂದರೆ ನನ್ನ ತಾಯಿ ಇರುತ್ತಾರೆ, ಅವರಿಗೆ 4 ಜನ ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರೇಂದರೆ, ದತ್ತಾತ್ರಯ, ಶಿವಲಿಂಗಪ್ಪ, ಚಂದ್ರಕಾಂತ, ನಾಗಪ್ಪ ಮತ್ತು ಮಲ್ಲಮ್ಮ ಇರುತ್ತಾರೆ. 1ನೇ ಪ್ರತಿವಾದಿ ಹೆಂಡತಿ ಹೆಸರು ಗುರುಬಾಯಿ ಎಂದರೆ ಸರಿ. 7ನೇ ಪ್ರತಿವಾದಿ ಗಂಡನ ಹೆಸರು ಸೈದಪ್ಪ ಇರುತ್ತದೆ ಎಂದರೆ ಸರಿ. 2 ಮತ್ತು 3ನೇ ಪ್ರತಿವಾದಿಯರು 1ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. 7 ಮತ್ತು 8ನೇ ಪ್ರತಿವಾದಿಯರು ಮಗ 9ನೇ ಪ್ರತಿವಾದಿ ಎಂದರೆ ಸರಿ. ವಾದಿ ಶಿವಲಿಂಗಪ್ಪ ನನಗೆ ಅಣ್ಣನಾಗಬೇಕು. ದಾವಾ 'ಎ' ಶೆಡ್ಯುಲ್‌ದಲ್ಲಿ ತೋರಿಸಿದ ಸ್ವತ್ತುಗಳನ್ನು ಶಿವಣ್ಣ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಾಲ್ಕು ಜನ ಗಂಡು ಮಕ್ಕಳಿಗೆ ಒಬ್ಬ ಹೆಣ್ಣು ಮಗಳಿಗೆ ಸಮನಾದ ಪಾಲು ಇದೆ ಎಂದರೆ, ಸಾಕ್ಷಿ ಸರ್ವೆ ನಂ.68 ಮಾರಾಟವಾಗಿದೆ ಎಂದು ನುಡಿಯುತ್ತಾರೆ ಹಾಗೂ ಇನ್ನು ಕೆಲವೊಂದಿಷ್ಟು ಖರೀದಿ ಮಾಡಿದ ಆಸ್ತಿಗಳನ್ನು ಸೇರಿಸಿಲ್ಲ ಎಂದು ನುಡಿಯುತ್ತಾರೆ.

ಮೇಲೆ ಹೇಳಿದ ಸರ್ವೆ ನಂ.68ನ್ನು ನಾಗಣ್ಣ ಸಾರವರ್ಡ ಕೊರಳ್ಳಿ ಗ್ರಾಮದವರಿಗೆ ಮಾರಾಟವಾಗಿರುತ್ತದೆ. ಸದರಿ ಜ ಮೀನನ್ನು ನನ್ನ ದೊಡ್ಡಪ್ಪ ಸಿದ್ದಣ್ಣ ಕಲಶೆಟ್ಟಿ ರವರು ಮಾರಾಟ ಮಾಡಿರುತ್ತಾರೆ. ಸದರಿ ಜಮೀನು ಕೇಲವೊಂದಿಷ್ಟು ಹಣ ಬರದೇ ಇರುವ ಕಾರಣ ನೋಂದಣಿ ಆಗಿರುವುದಿಲ್ಲ. ಸದರಿ ಸರ್ವೆ ನಂ.68ರ ಜಮೀನಿನ ಪಹಣಿ ಸದ್ಯ 3ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿಲ್ಲ, ಸದರಿ ಜಮೀನು ನಮ್ಮ ಕುಟುಂಬದ್ದೆ ಆಗಿರುತ್ತದೆ ಆದರೆ 3ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಮೇಲೆ ಹೇಳಿದ ನಾಗಣ್ಣ ಸಾರರ್ವಾಡ ನಮಗೆ ಸಂಬಂಧಿಕರು ಅಲ್ಲ. ಸದರಿ ನಾಗಣ್ಣ ರವರಿಗೆ ಸರ್ವೆ ನಂ.68ರ ಜಮೀನನ್ನು ಮಾರಾಟ ಮಾಡಿದ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇಲ್ಲ, ಅವರ ಹತ್ತಿರ ಇರಬಹುದು.

ಸದರಿ ನಾಗಣ್ಣ ಸಾಕಷ್ಟು ಬಾರಿ ಬಂದು ನನ್ನ ತಮ್ಮ 6ನೇ ಪ್ರತಿವಾದಿಯನ್ನು ತಮ್ಮ ಹೆಸರಿನಲ್ಲಿ ಮಾಡಿಕೊಡಿ ಎಂದು ಹೆದರಿಸಿರುತ್ತಾರೆ. ನಾವೆಲ್ಲ ಸೇರಿ ಸದರಿ ಜಮೀನನ್ನು ಮಾರಾಟ ಮಾಡಿಲ್ಲ ಉಳಿದ ಹಣವನ್ನು ಕೊಟ್ಟರೆ ಮಾತ್ರ ನಾವು ಮಾರಾಟ ಮಾಡಿಕೊಡುತ್ತೇವೆ ಎಂದು ನಾವು ಹೇಳಿರುತ್ತೇವೆ. ಆ ಕಾರಣ ಇವತ್ತಿನವರೆಗೂ ಮಾಲ್ಕಿ ನಮ್ಮದೇ ಇರುತ್ತದೆ, ಆದರೆ ದಾಖಲೆಗಳಲ್ಲಿ 3ನೇ ಪ್ರತಿವಾದಿ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.68ರ ಜಮೀನು 17 ಎಕರೆ 24 ಗುಂಟೆ ಇರುತ್ತದೆ. ನಮ್ಮ ಪ್ರತಿವಾದ ಪತ್ರದಲ್ಲಿ ನಾವು ಮಾರಾಟ ಮಾಡಿದ ವಿಷಯವನ್ನು ಹೇಳಿರುವುದಿಲ್ಲ. ಸರ್ವೆ ನಂ.68ರ ಭೂಮಿಯಲ್ಲಿಯು ಕೂಡಾ ನಮಗೆ ಪಾಲು ಬೇಕಾಗಿದೆ ಎಂದರೆ, ಸಾಕ್ಷಿ ಬಂದ ಮಾರಾಟದ ಹಣವನ್ನು ಎಲ್ಲರು ಹಂಚಿಕೊಂಡು ಅವರಿಗೆ ಮಾರಾಟ ಮಾಡುತ್ತೇವೆ ಎಂದು ನುಡಿಯುತ್ತಾರೆ.

ಇವತ್ತಿನವರೆಗೂ ಸದರಿ ಜಮೀನಿನಲ್ಲಿ ಹಂಚಿಕೆಯಾಗಿಲ್ಲ ಎಂದರೆ, ಸಾಕ್ಷಿ ನನ್ನ ದೊಡ್ಡಪ್ಪ ಮಾರಾಟ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ಸರ್ವೆ ನಂ.68ರ ಜಮೀನನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.68ರ ಜಮೀನು 3ನೇ ಪ್ರತಿವಾದಿ ಹೆಸರಿನಲ್ಲಿರುವ ಕಾರಣ ಅದು ಮಾರಾಟವಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.337/2 ಇದು 7 ಎಕರೆ 22 ಗುಂಟೆ ಶಿವಣ್ಣ ರವರ ಜಮೀನು ಎಂದರೆ, ಸಾಕ್ಷಿ ಅದು ಮತ್ತು ಇನ್ನೊಂದು ಸರ್ವೆ ನಂ.337/2 ಇದು 7 ಎಕರೆ 22 ಗುಂಟೆ ಎರಡು ಕೂಡಾ ಶಿವಣ್ಣ ರವರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ಶಿವಣ್ಣ ಇರುವವರೆಗೂ ಸದರಿ ಜಮೀನನ್ನು ತನ್ನ ಮಕ್ಕಳ ಮಧ್ಯ ಹಂಚಿಕೆ ಮಾಡಿಲ್ಲ ಎಂದರೆ ಸರಿ. ಶಿವಣ್ಣ ಸರಿಹೋದ ನಂತರ ನಮ್ಮಗಳ ಅಣ್ಣ-ತಮ್ಮಂದಿರ ಮಧ್ಯ ದಾವಾ ಸ್ವತ್ತುಗಳಲ್ಲಿ ಹಂಚಿಕೆಯಾಗಿಲ್ಲ ಎಂದರೆ ಸರಿ.

ನನ್ನ ತಂದೆ ಜೀವಂತ ಕಾಲಕ್ಕೆ ಸರ್ವೆ ನಂ.337/2ರ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ. 8ನೇ ಪ್ರತಿವಾದಿ ನಮ್ಮ ಅಣ್ಣ-ತಮ್ಮಕಿ ಅಲ್ಲ, ಆದರೆ ಬೀಗರು ಆಗಬೇಕು. 8ನೇ ಪ್ರತಿವಾದಿಯ ಖುದ್

ಊರು ದುದನಿ ಗ್ರಾಮ ಇರುತ್ತದೆ, ಆದರೆ ಅವರು ಮಾಡಿಯಾಳದಲ್ಲಿಯೇ ಇರುತ್ತಾರೆ. ನಮ್ಮ ಕುಟುಂಬದ ಸ್ವತ್ತುಗಳಿಗೆ 8ನೇ ಪ್ರತಿವಾದಿ ಸಂಬಂಧ ಇಲ್ಲ ಎಂದರೆ ಸರಿ. 7ನೇ ಪ್ರತಿವಾದಿಗೆ ಪಾಲು ಕೇಳುವ ಅಧಿಕಾರ ಇದೆ, 8ನೇ ಪ್ರತಿವಾದಿಗೆ ಅಧಿಕಾರ ಇಲ್ಲ ಎಂದರೆ ಸರಿ. 8ನೇ ಪ್ರತಿವಾದಿ ಜೀವಂತ ಇರುತ್ತಾರೆ. 8ನೇ ಪ್ರತಿವಾದಿ ಹೆಸರು ಸರ್ವೆ ನಂ.337ರ ಮೇಲೆ ದಾಖಲಾಗಿರುವುದಿಲ್ಲ, 9ನೇ ಪ್ರತಿವಾದಿ ಹೆಸರು ದಾಖಲಾಗಿರುತ್ತದೆ. 9ನೇ ಪ್ರತಿವಾದಿ ಕೂಡಾ ನಮ್ಮ ಅಣ್ಣ-ತಮ್ಮಕಿ ಅಲ್ಲ ಎಂದರೆ ಸರಿ.

9ನೇ ಪ್ರತಿವಾದಿಗೆ ನನ್ನ ತಂದೆ ಶಿವಣ್ಣ ರವರು ಉಪಜೀವನಕ್ಕೆ ಅಂತ ಸರ್ವೆ ನಂ.337ನ್ನು ಕೊಟ್ಟಿರುತ್ತಾರೆ. 8ನೇ ಪ್ರತಿವಾದಿ ದುದನಿ ಗ್ರಾಮ ಬಿಟ್ಟು ನಾನು ಹುಟ್ಟುವಕ್ಕಿಂತ ಮೊದಲೆ ನಮ್ಮ ಗ್ರಾಮಕ್ಕೆ ಬಂದಿರುತ್ತಾರೆ. 9ನೇ ಪ್ರತಿವಾದಿಗೆ ಸರ್ವೆ ನಂ.337ನ್ನು ಯಾವ ವರ್ಷದಲ್ಲಿ ಕೊಡಲಾಗಿದೆ ಎಂದರೆ ನನಗೆ ನೆನಪು ಇಲ್ಲ. ನನ್ನ ತಂದೆ 9ನೇ ಪ್ರತಿವಾದಿಗೆ ಮೇಲೆ ಹೇಳಿದ ಜಮೀನನ್ನು ಯಾವ ಮೂಲಕ ಕೊಟ್ಟರು ಎಂದು ನನಗೆ ಗೊತ್ತಿಲ್ಲ. 9ನೇ ಪ್ರತಿವಾದಿ ಹೆಸರು ಮೇಲೆ ಹೇಳಿದ ಜಮೀನಿನಲ್ಲಿ ಮೊದಲ ಬಾರಿಗೆ ಯಾವತ್ತು ಬಂತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಅಲ್ಪವಹಿ ಇದ್ದಾಗ ಮೇಲೆ ಹೇಳಿದ ಸರ್ವೆ ನಂಬರನ್ನು ಖರೀದಿಸಲಾಗಿತ್ತು ಎಂದರೆ ಸರಿ, ಅದನ್ನು ನನ್ನ ತಂದೆ ಶಿವಣ್ಣ ರವರು 9ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ. ಆ ಬಗ್ಗೆ ಮ್ಯೂಟೆಷನ್ ದಾಖಲೆಗಳು ಇರುತ್ತವೆ ಅವುಗಳನ್ನು ಹಾಜರುಪಡಿಸಿರುತ್ತೇನೆ.

9ನೇ ಪ್ರತಿವಾದಿ ಹೆಸರಿನಲ್ಲಿ ಯಾವಾಗ ಮ್ಯೂಟೇಷನ್ ಆಯಿತು ಎಂದು ನನಗೆ ಗೊತ್ತಿಲ್ಲ. ಪ್ರಭಾಕರ್ ಎಂಬುವವರು 8ನೇ ಪ್ರತಿವಾದಿಯ ಅಣ್ಣನಾಗಬೇಕು. ಸರ್ವೆ ನಂ.337ಕ್ಕೆ ಪ್ರಭಾಕರ್ ಯಾವುದೇ ರೀತಿ ಸಂಬಂಧ ಇರುವುದಿಲ್ಲ. ಸರ್ವೆ ನಂ.337 ಇದು 15 ಎಕರೆ 5 ಗುಂಟೆ ಜಮೀನು ಪ್ರಭಾಕರ್ ಹೆಸರಿನಲ್ಲಿ ಯಾವತ್ತು ಆದರೂ ದಾಖಲಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ ನನ್ನ ತಂದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ 15 ಎಕರೆ 5 ಗುಂಟೆ ಜಮೀನನ್ನು

ಉಪಜೀವನಕ್ಕಾಗಿ ಪ್ರಭಾಕರ ರವರಿಗೆ ಕೊಟ್ಟ ಜಮೀನನ್ನು ಯಾರಿಗಾದರೂ ಎತ್ತಿ ಕೊಡುವ ಅಧಿಕಾರ ಪ್ರಭಾಕರ್ ಇದೆಯಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಮೇಲೆ ಹೇಳಿದ ಭೂಮಿಯನ್ನು ಯಾರಿಗೂ ಕೊಟ್ಟಿರುವುದಿಲ್ಲ, ನನ್ನ ತಂದೆ ಮಾಡಿರುತ್ತಾರೆ. ನಮ್ಮ ಹಾಗೂ 1ನೇ ಪ್ರತಿವಾದಿಯ ನಿಲುವುಗಳು ಈ ಕೇಸಿನಲ್ಲಿ ಬೇರೆ-ಬೇರೆಯಾಗಿರುತ್ತವೆ.

ಸರ್ವೆ ನಂ.337ರ 15 ಎಕರೆ 5 ಗುಂಟೆ ಜಮೀನಿನಲ್ಲಿ ನಮಗೂ ಪಾಲು ಬೇಕು ಎಂದರೆ, ಸಾಕ್ಷಿ ಎಲ್ಲರಿಗೂ ಪಾಲು ಆಗಬೇಕು ಎಂದು ನುಡಿಯುತ್ತಾರೆ. ಸದರಿ 15 ಎಕರೆ 5 ಗುಂಟೆ ಜಮೀನನ್ನು ಎಲ್ಲರು ಕೂಡಿ ಸಾಗುವಳಿ ಮಾಡುತ್ತಿದ್ದೇವೆ. ನಿಡಿ-5ರ ಮ್ಯೂಟೇಷನ್ ಸರಿ ಇರುತ್ತದೆ, ಆದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-5ರ ಪ್ರಕಾರ 9ನೇ ಪ್ರತಿವಾದಿಗೆ ಕೊಟ್ಟಿದು ಸುಳ್ಳು ಇರುತ್ತದೆ ಎಂದರೆ ಸರಿ. 9ನೇ ಪ್ರತಿವಾದಿಗೆ ಯಾವ ದಾಖಲೆ ಮುಖಾಂತರ ಆತನಿಗೆ ಜಮೀನು ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಇವತ್ತಿನವರೆಗೂ 8 ಮತ್ತು 9ನೇ ಪ್ರತಿವಾದಿಗೆ ಆಗಲಿ ಅಥವಾ ಪ್ರಭಾಕರ್ ಆಗಲಿ ಯಾವುದೇ ಜಮೀನನ್ನು ಕೊಟ್ಟಿರುವುದಿಲ್ಲ, ನಮ್ಮ ಕುಟುಂಬದ ಜಮೀನುಗಳು ನಮ್ಮ ತಾಬಾದಲ್ಲಿ ಇರುತ್ತವೆ ಎಂದರೆ ಸರಿ.

ನನ್ನ ತಂದೆ ತಿರಿಕೊಂಡ ನಂತರ 1ನೇ ಪ್ರತಿವಾದಿ ದೊಡ್ಡವನು ಇರುವ ಕಾರಣ ಆತನೇ ಮನೆಯ ವ್ಯವಹಾರವನ್ನು ನೋಡಿಕೊಂಡು ಹೋಗುತ್ತಿದ್ದ ಎಂದರೆ, ವಾದಿ ಮತ್ತು 1ನೇ ಪ್ರತಿವಾದಿ ಇಬ್ಬರು ನೋಡಿಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿಗೆ ಕಾನೂನು ಪ್ರಕಾರ ಎಲ್ಲ ಸ್ವತ್ತುಗಳಲ್ಲಿ ಪಾಲು ಹೋಗುತ್ತದೆ ಹಾಗೂ ಅದನ್ನು ಕೊಡಬೇಕೆಂಬ ವಿಚಾರ ನಮ್ಮದು ಇರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ಜಮೀನುಗಳ ಪೈಕಿ ಸುಮಾರು 15-20 ಎಕರೆ ಜಮೀನು ನೀರಾವರಿ ಭೂಮಿ ಇದೆ ಎಂದರೆ, ಸಾಕ್ಷಿ ಸುಮಾರು 16 ಎಕರೆ ಇದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಆತನ ಹೆಂಡತಿ ಲಲಿತಾಬಾಯಿ ಇಬ್ಬರು ಸರ್ಕಾರಿ ನೌಕರಸ್ಥರು ಎಂದರೆ ಸರಿ. ಇಬ್ಬರು ಕೂಡಿ ಸುಮಾರು ರೂ.1 ವರೆ ಲಕ್ಷ ವೇತನ ಬರುತ್ತಿತ್ತು ಎಂದರೆ, ಸಾಕ್ಷಿ ಈಗ ಬರುತ್ತದೆ ಈ ಹಿಂದೆ

ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಆತನ ಹೆಂಡತಿ ಕಲಬುರಗಿಯ ಮನೆಯನ್ನು ಬ್ಯಾಂಕ್‌ನಿಂದ ಸಾಲ ಪಡೆದು ಪ್ಲಾಟ್ ಖರೀದಿಸಿ ಅದನ್ನು ಕಟ್ಟಿಸಿ, ಸಂಭಳ ಹಣದಿಂದ ಸಾಲ ತಿರಿಸಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.68/3 ಈ ಜಮೀನು ನನ್ನ ತಂದೆ ಶಿವಣ್ಣ ರವರದು ಅಲ್ಲ, ಅವರ ತಮ್ಮ ಶರಣಪ್ಪ ರವರದು ಇರುತ್ತದೆ. ಸದರಿ ಜಮೀನನ್ನು ನಾನು ಸಾಗುವಳಿ ಮಾಡುತ್ತಿದ್ದೇನೆ ಎದಂರೆ ಸರಿಯಲ್ಲ. ಮೇಲೆ ಹೇಳಿದ ನಾಗಣ್ಣ ಸಾರವರ್ಡ ರವರು ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಆತನ ಹೆಸರು ಇವತ್ತಿಗೂ ಪಹಣಿಯಲ್ಲಿ ಬಂದಿಲ್ಲ ಎಂದರೆ ಸರಿ, ಆದರೆ ಆತ ಖರೀದಿ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. 6ನೇ ಪ್ರತಿವಾದಿ ನನ್ನ ತಮ್ಮ ಇರುತ್ತಾನೆ. ಆತನ ತಂದೆ ಹೆಸರು ಶಿವಣ್ಣ ಕಲಶೆಟ್ಟಿ ಎಂದರೆ ಸರಿ. ನನ್ನ ಚಿಕ್ಕಪ್ಪ ಶರಣಪ್ಪ ರವರಿಗೆ ಯಾವುದೇ ಸಂತಾನ ಇಲ್ಲ ಎಂದರೆ ಸರಿ. ಸದರಿ ನನ್ನ ಚಿಕ್ಕಪ್ಪ ತಿರಿಕೊಂಡ ನಂತರ ಆತನ ಆಸ್ತಿ ನಮ್ಮ ಕುಟುಂಬಕ್ಕೆ ಬಂದಿತ್ತು ಎಂದರೆ ಸರಿ. 6ನೇ ಪ್ರತಿವಾದಿ ತಿರಿಕೊಳ್ಳುವವರೆಗೂ ತನ್ನ ಎಲ್ಲ ಶಾಲಾ ದಾಖಲೆಗಳಲ್ಲಿ ಹಾಗೂ ಇತರೇ ದಾಖಲೆಗಳಲ್ಲಿ ತನ್ನ ತಂದೆ ಹೆಸರು ಶಿವಣ್ಣ ಎಂದು ಇಟ್ಟುಕೊಂಡಿದ್ದ ಎಂದರೆ ಸರಿ.

ಸರ್ವೆ ನಂ.68/3ರ ಜಮೀನು ನಮಗೆ ಬಂದರೆ ನಾವು ತೆಗೆದುಕೊಳ್ಳುತ್ತೇವೆ ಎಂದರೆ, ಸಾಕ್ಷಿ ಅದು ಮಾರಾಟ ಮಾಡಿದ ಭೂಮಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.68/3ರ ಜಮೀನು 2008ರವರೆಗೂ ನಮ್ಮ ಚಿಕ್ಕಪ್ಪ ಸಂಗಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ತದನಂತರ 3ನೇ ಪ್ರತಿವಾದಿ ಹೆಸರಿನಲ್ಲಿ ಹೇಗೆ ಬಂದಿತು ಎಂದರೆ, ಸಾಕ್ಷಿ ನಾವು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಹೆಸರು ಪಹಣಿಯಲ್ಲಿ ಇದೆ, ಆದರೆ ಕಬ್ಜಾ ನಾಗಣ್ಣ ಸಾರವರ್ಡ ರವರದು ಇರುತ್ತದೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಹೆಸರಿನಲ್ಲಿ ಏಕೆ ಸದರಿ ಜಮೀನನ್ನು ಮಾಡಿರುತ್ತೀರಿ ಎಂದರೆ, ಸಾಕ್ಷಿ 6ನೇ ಪ್ರತಿವಾದಿಯನ್ನು ಖರೀದಿದಾರರು ಬಂದು ಹೆದರಿಸಲಿಕ್ಕೆ ಹತ್ತಿದರು ಆ ಕಾರಣ 3ನೇ ಪ್ರತಿವಾದಿ ಹೆಸರಿನಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಕಾರಣ

3ನೇ ಪ್ರತಿವಾದಿ ಸದರಿ ಜಮೀನಿನ ಮಾಲಿಕಳು ಅಲ್ಲ ಎಂದರೆ ಸರಿ.

ನಮ್ಮ ಕುಟುಂಬದ ಪೈಕಿ ಯಾರೂ ದತ್ತಕ ಹೋಗಿಲ್ಲ, ಆದರೆ 6ನೇ ಪ್ರತಿವಾದಿಯನ್ನು ಖರೀದಿದಾರರು ಹೆದರಿಸಿದ್ದ ಕಾರಣ ಸುಮ್ಮನೆ ಹಾಗೇ ದತ್ತಕ ಎಂದು ಮಾಡಿಕೊಂಡಿರುತ್ತೇವೆ. ನಾವು ಸುಮ್ಮನೆ ಹಾಗೇ ಮಾಡಿಕೊಂಡ ದತ್ತಕದ ಪ್ರಕಾರ 6ನೇ ಪ್ರತಿವಾದಿ ತನ್ನ ಜನಕ ತಂದೆ ಶಿವಣ್ಣ ರವರ ಹೆಸರಿನಿಂದಲೇ ಎಲ್ಲ ದಾಖಲಾತಿಗಳಲ್ಲಿ ಕರೆಯಿಸಿಕೊಳ್ಳುತ್ತಿದ್ದರು ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**